4619
9

Protect the Cow
ಗೋರಕ್ಷಣೆ ನಡೆಯಲಿ
—
ಸತ್ಯವಾದಿ ಪತ್ರಿಕೆಗೆ
ಚಂದಾದಾರಾಗಿರಿ

Regd No M 1299 33½ನೇ ವರ್ಷ ತಾ|| 31—3—50

ಸತ್ಯವಾದಿ
SATYAVADI

Edited, Printed and Published by M. S. Krishna Rao at the Satyavadi Press, Chamarajapuram Mysore

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ವರ್ತಮಾನ ಸಂಗ್ರಹ

ಬೆಂಗಳಕೆರಿನಲ್ಲಿ ಕೂಡಿರುವ ಶಾಸನ ಸಭೆಯಲ್ಲಿ ನಿನ್ನೆ ವಿದ್ಯಾ ಬೇಡಿಕೆ ಮೇಲೆ ಉರ್ದು ಶಾಲೆಗಳು ರದ್ದಾಗಬೇಕೆಂಬ ಖೋತಾ ನಿರ್ಣಯ ಮಂಡಿಸಲ್ಪಟ್ಟು ಸಚಿವರ ಉತ್ತರವಾದನಂತರ ವಾಪಸು ಪಡೆಯಲಾಯಿತು

ಂ ಂ

ಮೇ 7 ರಿಂದ ಅಂಚೇ ಇಲಾಖೆ ಪ್ರತಿಭಾನವಾರ ಬಂದಾಗುವದೆಂದು ದಿಲ್ಲಿಯಿಂದ ಅಧಿಕೃತ ಮಾದಿ ಬಂದಿದೆ.

ಂ ಂ

27 ಕೋಟಿ ರೂ. ಸಾಲವನ್ನು ಉಕ್ಕು ಮತ್ತು ಕಬ್ಬಿಣ ಹೆಚ್ಚು ಉತ್ಪಾದಿಸಲು ಮೈಸೂರು ಸರ್ಕಾರ ಭಾರತ ಸರ್ಕಾರವನ್ನು ಸಾಲ ಕೇಳಿದೆ ಎಂದು ಡಾ|| ಶ್ಯಾಂಪ್ರಸಾದ ಮುಖರ್ಜಿ ಪಾರ್ಲಿಮೆಂಟ್ನಲ್ಲಿ ತಿಳಿಸಿದರು.

ಂ ಂ

ಭಾರತ ರಾಷ್ಟ್ರೀಯ ಹಿಂದೂಗಳೆಂಬ ನೆಪ್ಪು ಭಾರತ ವರ್ಷದ ಧರ್ಮ ಸಂಸ್ಕೃತಿಗಳಿಗೆ ಅನುಗುಣವಾಗಿ ಜೀವನ ನಡಸಲು ಸಂಪೂರ್ಣ ಹಕ್ಕುಳ್ಳವರೆಂಬ ಪ್ರಾಚೀನ ಸಿದ್ಧಾಂತವನ್ನು ಧೈರ್ಯವಾಗಿ ಒಪ್ಪಿಕೊಂಡ ಪೂರ್ವ ಬಂಗಾಳದ ಹಿಂದೂಗಳನ್ನು ರಕ್ಷಿಸಲು ಏನು ಬೇಕಾದರೂ ಮಾಡಲು ಸಿದ್ಧವೆಂದು ಸರ್ಕಾರವು ಘೋಷಿಸಬೇಕು – ' ಎಂಬ ಠರಾವು ಮೊನ್ನೆ ಸಂಜೆ ಚಿಕ್ಕಲಾಲ್'ಬಾಗಿನಲ್ಲಿ ಶ್ರೀ ಜಿ ಎ. ರಾಮುಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿದ್ದ ಬಹಿರಂಗ ಸಭೆಯಲ್ಲಿ ತೀರ್ಮಾನವಾಯಿತು.

ಂ ಂ

ಮೊನ್ನೆ ದಿವಸ ಹೈದರಾಬಾದಿನ ಸುದ್ದಿಗಾರರ ಸಂಮೇಳನದಲ್ಲಿ ಮಾತನಾಡುತ್ತಾ ಅಲ್ಲಿನ ಕಮ್ಯೂನಿಷ್ಟ್ ಪಕ್ಷದ ಮುಂದಾಳು ಶ್ರೀ ಮಹದೇವಸಿಂಗರು ನಾಮಕರಣ ಮೂಲಕ ರಚಿತವಾಗುವ ಸರ್ಕಾರದಲ್ಲಿ ಕಮ್ಯೂನಿಷ್ಟರು ಸೇರುವುದಿಲ್ಲ. ಚುನಾವಣೆ ಮೂಲಕ ಏರ್ಪಾಟಾಗುವ ಸರ್ಕಾರದಲ್ಲಿ ಸೇರುವೆವು ಎಂದರು

ಕೇರಳ ವಿಶ್ವವಿದ್ಯಾನಿಲಯ ಎಂಬ ನಾಮಧೇಯವನ್ನು ತಿರುವಾಂಕೂರು ವಿಶ್ವವಿದ್ಯಾನಿಲಯಕ್ಕೆ ಕೊಡಲಾಗಿದೆ.

ಂ ಂ

ಮೊನ್ನೆ ದಿವಸ ಅಮೇರಿಕ್ಕ ಪ್ರತಿನಿಧಿ ಸಭೆಯಲ್ಲಿ ಐರ್ಲೆಂಡ್ ವಿಕೀಕರಣ ಆಗುವ ವರಿಗೂ ಬ್ರಿಟ್ಟಿಗೆ ಮಾರ್ಷಲ್ ಯೋಜನೆ ರೀತ್ಯ ಸಹಾಯ ಮಾಡಕೂಡದೆಂದು ತೀರ್ಮಾನಿಸಲಾಯಿತೆಂದು ವಾಷಿಂಗ್ಟ್ ವಂದಿ,

ಂ ಂ

ಶ್ರೀ ರಮಣ ಮಹರ್ಷಿಗಳ ದೇಹಸ್ಥಿತಿ ಚಿಂತಾಜನಕವಿದೆಯೆಂದು ತಿರುವಣ್ಣಾವಲೆಯಿಂದ ಸುದ್ದಿ ಬಂದಿದೆ.

ಂ ಂ

ಮೊನ್ನೆ ದಿವಸ ಪ್ರಥವ ಖಾರಿ ಬ್ರಿಟೀಷ್ ಕಾರ್ಮಿಕ ಸಚಿವ ಮಂಡಲಕ್ಕೆ ಸೋಲುಂಟಾಯಿತು. ಆದರೆ ಸಚಿವ ಮಂಡಲ ರಾಜೀನಾಮೆ ಕೊಡಬೇಕಾದ ಪ್ರಮೇಯವಿಲ್ಲ.

ಂ ಂ

ಕಳೆದ ಶನಿವಾರ ಸಾಥಿಯಲ್ಲಿರುವ ಅರಳೇ ಗಿರಣಿಗೆ ಬೆಂಕಿ ಬಿದ್ದು ರೂ. ಹತ್ತು ಲಕ್ಷ ನಷ್ಟ ಉಂಟಾಯಿತೆಂದು ಬರೋಡಾ ವಂದಿ.

ಂ ಂ

ಕಾನಪುರದಲ್ಲಿ ಕಾಳಸಂತೆಯಲ್ಲಿ ಬಟ್ಟೆ ಮಾರುತ್ತಿದ್ದ ಪ್ರಯುಕ್ತ 7 ಮಂದಿ ದಸ್ತಗಿರಿ ಮಾಡಲ್ಪಟ್ಟರು.

ಂ ಂ

ಕಮ್ಯೂನಿಸ್ಟ್ ಹಾವಳಿಯನ್ನು ಹೈದರಾಬಾದಿನಲ್ಲಿ ತಡೆಯಲು ತ್ವರಿತ ಕ್ರಮ ಅಗತ್ಯವೆಂದು ಆಚಾರ್ಯ ರಂಗ ಮನವಿ ಮಾಡಿರುವ ವಂದಿ ದಿಲ್ಲಿಯಿಂದ ಬಂದಿದೆ

ಂ ಂ

ಚುನಾವಣೆ ಕ್ಷೇತ್ರಗಳನ್ನು ಪುನರ್ವಸ್ಥೆಗೊಳಿಸಿ ಕಮಿಷನರಿಗೆ ಅಧಿಕಾರಕೊಡುವ ಮುಂತಾದ ವಿಷಯಗಳನ್ನೊಳಗೊಂಡ ಮಹಾ ಚುನಾವಣೆಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆ ಸಧ್ಯದಲ್ಲಿಯೇ ಮಂಡಿಸಲ್ಪಡಲಿದೆ.

ಮೈಸೂರು ಭಾರತ ಸರ್ಕಾರವನ್ನು ಸಾಲ ಕೇಳಿದೆ

ಹಾಳುದಾವಿಯಲ್ಲಿ ಕ್ಷೀಣಾವಸ್ಥೆಯಲ್ಲಿದ್ದ ಮಸೀದಿಯಲ್ಲಿ ವಿಗ್ರಹವನ್ನಿಟ್ಟ ಪ್ರಯುಕ್ತ ಗಲಭೆಗೆ ಕಾರಣವಾಯಿತೆಂದು ಲಕ್ನೋ ವಾರ್ತೆ

ಂ ಂ

ಬೆಂಗಳೂರು ಹೊಸ ತಂಗುಪೇಟೆಯಲ್ಲಿನ ಸೀವೆ ಯೆಂಗೆ ವ್ಯಾಪಾರಿ ಶ್ರೀ ಸಂಪಂಗಿರಾಮಯ್ಯನವರಿಗೆ ನಿನ್ನೆ ದಿವಸ ಸಿಟಿ ಮ್ಯಾಜಿಸ್ಟ್ರೇಟರು ಕಾಳಸಂತೆ ಆರೋಪದ ಮೇಲೆ ರೂ ಸಾವಿರ ದಂಡ ಮತ್ತು 3 ತಿಂಗಳು ಕಠಿಣ ಶಿಕ್ಷೆ ವಿಧಿಸಿದರು ದಂಡ ಕೊಡದಿದ್ದರೆ ಪುನಃ 3 ತಿಂಗಳ ಕಠಿಣ ಸಜೆ ವಿಧಿಸಿದರು.

ಂ ಂ

ಇಬ್ಬರು ಪ್ರಧಾನಿಗಳ ಸಂದರ್ಶನ ಬಗೆಗೆ ನಾನು ಅಶಾದಾಯಕನಿರುವೆ –ಹೀಗೆಂದು ರಾಜಾಜಿಯವರು ತಿಳಿಸಿರುವರೆಂದು ಮದರಾಸ ವಂದಿ

ಂ ಂ

ಬಾಕಾವರದಲ್ಲಿನ ಕಮಾಂಗಟ್ಟಿದ ಲಂಬಾಣಿಗರ ಕೇರಿಗೆ ಬೆಂಕಿ ಬಿದ್ದು 9 ಮನೆಗಳು ಸುಟ್ಟು ಹೋದವು.

ಂ ಂ

ಬಸವನಹಳ್ಳಿಯಲ್ಲಿ ಒಬ್ಬಾತನೂ ನೆರೆ ಹಳ್ಳಿಯಲ್ಲಿ ಒಬ್ಬಾತನೂ ತಮ್ಮ ಹೆಂಡರನ್ನು ನಡತೆ ಸಂಶಯಕ್ಕಾಗಿ ಕೊಂದಿರುವರು.

ಂ ಂ

ಲಂಡನ್ — ಮಲಯಾ ಜೋಹರ್ ಸುಪ್ರೀಂ ಕೋರ್ಟಿನಲ್ಲಿ ರಿವಾಲ್ವರ್ ಹಾರಿಸಿದ್ದ ಅಪರಾಧಕ್ಕಾಗಿ ಮರಣದಂಡನೆ ವಿಧಿಸಲಾಗಿದ್ದ ಸಾಂಬಶಿವನ್ ಬದುಕಿಕೊಂಡ ಭಾರತ ಸರ್ಕಾರ ಮುತುವರ್ಜಿ ವಹಿಸಿ ಪ್ರಿವೀ ಕೌನ್ಸಿಲಿನಲ್ಲಿ ಈ ಬಗ್ಗೆ ಹಾಕಿಸಿದ್ದ ಅಪೀಲಿನಲ್ಲಿ ಮರಣ ದಂಡನೆ ರದ್ದುಪಡಿಸಲಾಗಿದೆ.

ಮೈಸೂರು ಸರ್ಕಾರದವರು ಪ್ರಕಟಣೆಯೊಂದನ್ನು ಹೊಂಡಿಸಿ ಸಾಸ್ಥಾನದ ಕೆಲವರು ವರ್ತಕರು ಸಕ್ಕರೆಯನ್ನು ಅಪಹರಿಸುತ್ತಿರುವ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಈ ರೀತಿ ವರ್ತನೆ 1949 ನೆ ಸಕ್ಕರೆ ಹತೋಟಿ ಆಜ್ಞೆಗೆ ವಿರುದ್ಧವಾದುದೆಂದೂ ಈ ರೀತಿ ಅಮದನ್ನು ತಪ್ಪಿಸುವ ಸಲುವಾಗಿ ಸಕ್ಕರೆಯನ್ನು ಅಹಾರ ಹತೋಟಿ ಆಜ್ಞೆ ಪಟ್ಟಿಯಲ್ಲಿ ಸೇರಿಸಲಾಗಿದೆಯೆಂದೂ ತಿಳಿಸಿದ್ದಾರೆ. ಯಾವ ರೀತಿಯಿಂದ ತಯಾರಿಸಿದ ಸಕ್ಕರೆಯನ್ನೂ ಅಹಾರ ಶಾಖೆ ಅಧಿಕಾರಿಗಳ ಅನುಮತಿಯಿಲ್ಲದೆ ಸಂಸ್ಥಾನಕ್ಕೆ ಆಮದು ಮಾಡುವಂತಿಲ್ಲ

ಶಿವಮೊಗ್ಗ ಪೌರಸಭೆ ಚುನಾವಣೆಯಲ್ಲಿ ಸಮಾಜವಾದಿಗಳಿಗೆ ಪ್ರಥಮ ವಿಜಯ ದೊರೆಯಿತು ಪ್ರಸಿದ್ಧ ಕಾಂಗ್ರೆಸ್ ಮುಂದಾಳು ಶ್ರೀ ಕೆ. ಜಯ ತೀರ್ಥಾಚಾರ್ಯರು ಸೋತರು.

ಂ ಂ

ಶಿವಮೊಗ್ಗದಿಂದ ಬಂದಿರುವ ವಂದಿ ಪ್ರಕಾರ 3 ದಿವಸಗಳ ಹಿಂದೆ ಲಕ್ಕವಳ್ಳಿಯಲ್ಲಾದ ಬೆಂಕಿ ಅನಾಹುತದಿಂದ ಸುಮಾರು ಒಂದೂವರೆ ಲಕ್ಷ ರೂ. ನಷ್ಟವಾಗಿದೆ.

ಂ ಂ

ಭಾರತದ ಸರ್ವ ರಾಜಕೀಯ ಸಂವೆಕ್ಷಣ ಕರೆಯುವದಂಲ್ಲಿ ತೊಂದರೆ ಉಂಟಾಗಿದೆ ಎಂದು ಸಂ|| ನೆಹರು ಜಯಪ್ರಕಾಶರಿಗೆ ಪತ್ರ ಬರೆದಿರುವರೆಂದು ಪಾಟ್ನ ವಂದಿ

ಂ ಂ

ಹೊಂತಾ ಹತೋಟಿಯಲ್ಲಿದೆ. ಸಧ್ಯದಲ್ಲಿಯೆ ಮಾರ್ಷಲ್ ಲಾ ರದ್ದಾಗಬಹುದು

ಂ ಂ

ಪಾಕೀಸ್ತಾನ ಸೆಣಬು ಭಾರತಕ್ಕೆ ಬರುವ ಬಗ್ಗೆ ಒಪ್ಪಂದವಾಗಿದೆ

ಯಾಚನೆಯ ಮರ್ಮ

(ಮುಂದುವರಿದುದು)

ರಾತ್ರಿ ಶೈಲು ಸ್ಟೇಷನ್ನಿನಲ್ಲಿ ಮಲಗಿದ್ದೆನು, ನನ್ನ ಸರ್ವಸ್ವವೂ ಅಪಹರಿಸಲ್ಪಟ್ಟಿತು, ನನಗೆ ಊರಿಗೆ ಹೋಗಲು ಸಹಾಯಮಾಡಿ, ಎಂದು ಬೇಡಿಕೊಳ್ಳುವಿಕೆಯು ಮತ್ತೊಂದು ಬಗೆಯ ಯಾಚನೆ

ಬೀದಿಯಲ್ಲಿ ಹೋಗುತ್ತಾ ನಶ್ಯವು ಅವಶ್ಯಕವೆಂದು ತೋರಿದಾಗ ನಶ್ಯ ಹಾಕಿಕೊಳ್ಳುತ್ತಾ ಹೋಗುವವರನ್ನು ಕಂಡು ಅವರ ಮುಂದೆ ಒಂದು ಚಿಟಿಕೆಗಾಗಿ ಕೈ ಚಾಚುವುದು : ಬೀಡಿ ಸೇದುವವನನ್ನು ಕಂಡು ಒಂದು ಬೀಡಿಯನ್ನು ಕೇಳುವುದು ಭಿಕ್ಷವಲ್ಲವೇ !

ಸ್ನೇಹಿತನು ಪೇಟೆಯಲ್ಲಿ ಕಂಡು ಒಂದಾಗ ' ಬಾ ಕಾಫಿ ಕುಡಿದು ಬರೋಣ ' ಎಂದು ಹೇಳುತ್ತಾ ದವನನ್ನು ಕರೆದುಕೊಂಡು ಹೋಗಿ, ಕಾಫಿ ಕುಡಿದು, ಬಿಲ್ಲನ್ನು ತಾನು ಕೊಡದೆ ಸ್ನೇಹಿತನನ್ನೇ ಕೊಡುವಂತೆ ಮಾಡುವುದು ಯಾಚನೆಯಲ್ಲವೇ ಏನು ?

ಈ ದಿನ ಒಳ್ಳೇ ಪಿಕ್ಚರ್, ನನ್ನ ಪರ್ಸು ವರಿತುಹೋಗಿದೆ, ಇದೇ ಕೊನೇ ದಿನ ಎನ್ನುತ್ತಾ ಸ್ನೇಹಿತನೊಂದಿಗೆ ಪಿಕ್ಚರಿಗೆ ಹೋಗುವುದು ಭಿಕ್ಷಾಟನೆಯಲ್ಲವೇ ?

' ನನ್ನ ಮಗನ ಉಪನಯನ, ನನ್ನ ಮಗಳ ಮದುವೆ ' ಎನ್ನುತ್ತಾ ಬಂದು ಹಣವನ್ನು ವಸೂಲ್ಮಾಡುವದು, ' ನಾನು ಸಂಸ್ಥಾಹ ಮಾಡಲಿಕ್ಕೆ ಸಂಕಲ್ಪಿಸಿದ್ದೇನೆ ದೇವಾಲಯವನ್ನು ಕಟ್ಟಿಸಲ್ಕೇನೆ' ಎನ್ನುತ್ತಾ ಹಣವನ್ನು ವಸೂಲ್ಮಾಡುವುದು ನಾಗರೀಕ ಯಾಚನೆ.

ಕಚೇರಿಗೆ ಯಾವುದಾದರೂ ಕೆಲಸಕ್ಕಾಗಿ ಹೋದಾಗ ಗುಮಾಸ್ತನು ' ಬನ್ನಿ ಕಾಫಿ ಕುಡಿದು ಬರೋಣ ' ಎನ್ನುತ್ತಾ ಅವನ ಮೂಲಕ ಕಾಫಿಯನ್ನು ಕುಡಿದು ಬರುವುದು ಯಾಚನೆಯಲ್ಲವೆ ?

ಕಂಟ್ರಾಕ್ಟರನು ಬಿಲ್ಲನ್ನು ಮಾಡುವಾಗ ತನ್ನ ಕೆಲಸದ ಮೇಲಿರುವ ಅಧಿಕಾರಿಗೂ, ಬಿಕ್ಕನ್ನು ತೆಗೆದುಕೊಳ್ಳುವಾಗ ಗುಮಾಸ್ತನಿಗೂ ವಿಧಿಯಿಲ್ಲದೆ ತಲುಪಿಸ ಬೇಕಾಗಿ ಬರುವ ರುಸುವು ಯಾಚನೆಯ ರೂಪವಾದುದಲ್ಲವೇ !

ವರಶುಲ್ಕ, ಕನ್ಯಾಶುಲ್ಕ ಇತ್ಯಾದಿಗಳು ಯಾಚನೆಯ ರೂಪವಾದುವುಗಳೇ ತಾನೇ ! ' ನನಗೆ ಗಡಿಯಾರ ಬೇಕು, ಉಂಗುರ ಬೇಕು, ಹ್ಯಾಟ್ ಬೂಟ್ ಬೇಕು ಅವನ್ನು ಕೊಡದಿದ್ದಲ್ಲಿ ನಿನ್ನ ಮಗಳನ್ನು ನಾನು ಮದುವೆ ಮಾಡಿಕೊಳ್ಳುವುದಿಲ್ಲ ' ಎಂದು ಮಾನವನನ್ನು ಹೆದರಿಸಿ ಅವುಗಳನ್ನು ಬಲವಂತವಾಗಿ ಪಡೆಯುವುದು ಬಲವಂತ ಯಾಚನೆಯಲ್ಲವೇ ?

ವಿಶ್ವವೇ ಈ ಯಾಚನೆಯ ಶೃಂಖಲದಲ್ಲಿ ಒಂದಿಸಲ್ಪಟ್ಟಿದೆ ಇದರಿಂದ ಬಿಡುಗಡೆಯು ಸರ್ವಸಾಧಾರಣದವರಿಗೆ ಅಸಂಭವವೇ ಸರಿ

ಯಾವ ಮಹಾತ್ಮನು ಈ ಯೋಚನಾ ಪರಿಧಿಯಿಂದ ತಪ್ಪಿಸಿಕೊಂಡಿರುವನೋ ಅವನೇ ವೀರನು, ಧೀರನು, ಜ್ಞಾನಿಯು.

(ಓಂ)

ಮೈಸೂರು ಸಿಟಿ

ರೇಷನಿಂಗ್ ಆಫೀಸು

ಪ್ರಕಟಣೆ

ನಂ R 6 – 66 / 4 9- 50

ತಾ|| 20-3-1950

ಇದರಿಂದ ಮೈಸೂರು ಸಿಟಿಯಲ್ಲಿರುವ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :

1950 ನೇ ಇಸವಿ ಮಾರ್ಚಿ ಪಾಹಿ 26 ನೇ ತಾರೀಖು ಆಗಾಯಿತು, ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷ್ಡಿಪೋ ಸರ್ಕಾರಿಡಿಪೋ, ಸಬ್ ಗೋಡ್ಡೌ ಮತ್ತು ಸಹಕಾರ ಸಂಘಗಳು ಪ್ರತಿಭಾನುವಾರವೂ ಮೈಸೂರು ಷಾಪ್ಸ್ ಅಸಿಸ್ಟೆಂಟ್ ಆಕ್ಟ್ 1948 ರ ಪ್ರಕಾರ ಪೂರ್ತಿ ಮುಚ್ಚಲ್ಪಡುತ್ತವೆ.

ಪ್ರತಿ ಗುರುವಾರ ಎಲ್ಲಾ ಡಿಪೋಗಳು ಪೂರ್ತಿ ಕೆಲಸ ನಡೆಸುತ್ತವೆ.

(ಸಹಿ) ಡಿ. ಜೆ. ಜಾಲರಾಜ್

ರೇಷನಿಂಗ್ ಆಫೀಸರ್

ಮೈಸೂರು ಸಿಟಿ

ರಣಜಿತ್ — 31–3–50 ರಿಂದ

ಯಾಕೂಬ್, ಸುಲೋಚನ ಚಟರ್ಜಿ, ಮುಸೂದ್ ಪಾತ್ರವಹಿಸಿರುವ

ಆ ಯಿಷಾ ಯೆ ❁ ಆ ಯಿಷಾ ಯೆ

(ಸುಂದರ ಹಿಂದಿ ಚಿತ್ರ) ಪ್ರತಿ ದಿನ 3 ಪ್ರದರ್ಶನಗಳು

ಬೆಳಿಗಿನ ಪ್ರದರ್ಶನ 31–3–50 ರಿಂದ 3 ದಿನಗಳು — " ಬಿ ಟಿ "

ಅಪೇರಾ — ಅಮೋಘ 3 ನೇ ವಾರ

ರಾಜಕುಮಾರಿ — ವೈಜಯಂತಿಮಾಲ — ಬಾಲಯ್ಯ — ತಾಪಸ್ವಾಮಿ

ಪಾತ್ರವಹಿಸಿರುವ

ವಿಜಯ ಕುಮಾರಿ

ಸೊಬಗಿನ ಕನ್ನಡ ಚಿತ್ರ • ಪ್ರತಿ ದಿನ 3 ಆಟಗಳ

ವುಡ್‌ಲ್ಯಾಂಡ್ಸ್ — ಜನಪ್ರಿಯ 3 ನೇ ವಾರ

PATANGA

ಪತಂಗ

ನಿಗಾರ್, ಪೂರ್ಣಿಮಾ, ಶ್ಯಾಮ್, ಗೋಪ್, ಯಾಕೂಬ್ ಅಭಿನಯಿಸಿರುವ ಸಂಗೀತ ಹಾಸ್ಯಮಯ ಸಾಮಾಜಿಕ ಹಿಂದಿ ಚಿತ್ರ] ಪ್ರತಿ ದಿನ 3 ಆಟಗಳು

Woodlands — ಬೆಳಿಗಿನ ಪ್ರದರ್ಶನ — 31–3–50 ರಿಂದ

Masked Marvel ❁ ಮಾಸ್ಕ್ಡ್ ಮಾರ್ವೆಲ್

(ರೋಮಾಂಚದಾಯಕ ರಿಪಬ್ಲಿಕ್ ಸೀರಿಯಲ್)

ಐ. ಟಿ. ಎಲ್. ಗ್ರೈಪ್ ಸಿರಪ್



ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಕಡಿದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ಸಂಪುಟ ೧೦ ಸಂಚಿಕೆ ೧ ॥ ಶ್ರೀ ॥ ಶಾ॥ 27-8-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೈವಲ್ಯಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

' ಭಾರತವೂ ರಾಮರಾಜ್ಯವೂ '

ಶ್ರೀಮಜ್ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ದ್ವಾರಕಾ ಪೀಠಾಧೀಶ್ವರ
ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಆಶೀರ್ವಾದಾತ್ಮಕ ಭಾಷಣ, ಮತ್ತು
— ರಾಮರಾಜ್ಯ ಪರಿಷತ್ತಿನ ಸಾಹಿತ್ಯದಿಂದ ಆರಿಸಿದ್ದು —

೧ ಇಂದು ಪ್ರಜೆಗಳು ಸ್ವಾತಂತ್ರ್ಯೋತ್ಸವದ ನಿಜವಾದ ಆನಂದವನ್ನು ಅನುಭವಿಸುತ್ತಿರುವರೇ ?

ಇಂದು ಭಾರತವರ್ಷದ ಸ್ವಾತಂತ್ರ್ಯದ ಎರಡನೇ ವಾರ್ಷಿಕೋತ್ಸವ. ಭಾರತವು ಎಷ್ಟೋ ಶತಾಬ್ದಗಳ ದಾಸ್ಯದಿಂದ ಬಿಡುಗಡೆಹೊಂದಿ, ಇದೀಗ ಸ್ವಾತಂತ್ರ್ಯವನ್ನು ಪಡೆದು ನಾಲ್ಕು ವರ್ಷಗಳಾದವು. ಆದರೆ ಇಂತಹ ರಾಷ್ಟ್ರೀಯ ಹಬ್ಬದ ದಿನ ಪ್ರಜೆಗಳಲ್ಲಿ ಎಷ್ಟುರಜೀಕೋ ಅಷ್ಟು ಉತ್ಸಾಹ ಆನಂದ ಗಳಿವೆಯೇ ? ಅಂತಹ ಆನಂದೋತ್ಸಾಹದಿಂದ ಈ ರಾಷ್ಟ್ರೀಯ ಉತ್ಸವವನ್ನು ಪ್ರಜೆಗಳು ನಡೆಸುತ್ತಿರುವರೇ ? ಇಲ್ಲ. ಯಾಕೆ ? ಯಾಕೆಂದರೆ ಕಾರಣವೂ ಸ್ಪಷ್ಟವಾಗಿಯೇ ಇದೆ

ದೇಶವು ಯದ್ಯಪಿ ಸ್ವತಂತ್ರವಾಯಿತು. ಆದರೂ ಸ್ವರಾಜ್ಯ ಪಡೆದುದಂ ನಿಜವಾದ ಫಲ, ಸುಖಶಾಂತಿ ಲಭಿಸಿಲ್ಲ ; ಅದಕ್ಕೆ ವಿಪರೀತವಾಗಿ ಎಲ್ಲಾ ವಿಧದಿಂದಲೂ ದುಃಖವೇ ಹೆಚ್ಚಾಗುತ್ತಿದೆ ಜೀವನಕ್ಕೆ ಅತ್ಯಾವಶ್ಯವಾದ ಆಹಾರ, ಬಟ್ಟೆ ಮುಂತಾದುವು ದುರ್ಲಭವೂ ಅನರ್ಘವೂ ಆಗಿವೆ ಟ್ಯಾಕ್ಸುಗಳು ಹೆಚ್ಚಾದವು ; ವಿದ್ಯೆ, ನ್ಯಾಯ, ಚಿಕಿತ್ಸೆ ಮುಂತಾದವುಗಳು ಬಹು ಅನರ್ಘವಾದವು. ಇಷ್ಟು ಮಾತ್ರವಲ್ಲದೆ ದೇಶದ ಒಳಗಿನ ಮತ್ತು ಹೊರಗಿನ ಎಲ್ಲಾ ಸ್ಥಿತಿಗಳೂ ಚಿಂತಾಜನಕವಾಗಿವೆ ; ಎಲ್ಲೆಲ್ಲಿಯೂ ಸ್ವಾರ್ಥ, ಅಲಸ್ಯ, ರಾಗದ್ವೇಷಾದಿಗಳೂ, ದಂಭಾಭಿಮಾನಿಗಳೂ, ಅನೀತಿ, ಭ್ರಷ್ಟಾಚಾರ, ಲಂಚಗೂಳಿತನಗಳೂ, ಮತ ಭೇದವೂ ಹೆಚ್ಚಾಗಿದೆ.

ಇದೂ ಅಲ್ಲದೆ ನಮ್ಮ ದೇಶವು ಸ್ವತಂತ್ರವಾದನಂತರವೂ ಕೂಡ ನಮ್ಮ ಧರ್ಮ ಸಂಸ್ಕೃತಿಗಳು ಭಯದಲ್ಲಿವೆ ; ಪಾಶ್ಚಾತ್ಯರ ಅಂಧಾನುಕರಣೆಯು ಹೆಚ್ಚುತ್ತಾ, ಧರ್ಮ ಸಂಸ್ಕೃತಿಗಳ ಪರಿವರ್ತನೆ ಮಾಡುವ ನೆಪದಿಂದ ಇವುಗಳ ನಾಶವೇ ನಡೆಯುತ್ತಿದೆ

ಆದ್ದರಿಂದ ದೇಶದಲ್ಲಿ ಯಾವ ಯಾವ ತರಹದ ರಾಜ್ಯವ್ಯವಸ್ಥೆಯಿರಬೇಕೆಂಬುದನ್ನೂ, ಯಾವುದು ನಮ್ಮ ದೇಶಕ್ಕೆ ಹಿತಕರವೆಂಬುದನ್ನೂ ಸಹೃದಯರಲ್ಲಿ ಈ ನ್ಯಾಯದಿಂದಿಲ್ಲಿ ವಿಚಾರಿಸೋಣ—

೨ ಭಾರತದ ವಾಸ್ತವಿಕ ಸ್ಥಿತಿ— ಭಾರತವರ್ಷವು ಧರ್ಮ, ಮತ್ತು ಜ್ಞಾನಕ್ಕೆ ಪ್ರಧಾನ ದೇಶವಾಗಿತ್ತು. ಇಲ್ಲಿಯ ಯಾವತ್ತೂ ಪ್ರಜೆಗಳು ವರ್ಣಾಶ್ರಮಧರ್ಮ ಪಾರಾಯಣರೂ, ಈಶ್ವರಭಕ್ತಿ ಸಂಪನ್ನರೂ ಸತ್ಯವಾಕ್ಯಗಳೂ, ದೈವಿ ಸಂಪದ್ಯುಕ್ತರೂ ಆಗಿರುತ್ತಿದ್ದರು. ನಾಲ್ಕೂ ವರ್ಣದವರೂ ತಮ್ಮ ತಮ್ಮ ಧರ್ಮವನ್ನು ಸಂಪೂರ್ಣವಾಗಿ ಪಾಲಿಸುತ್ತಿದ್ದರಲ್ಲದೆ ತಮ್ಮೊಳಗೆ ಯಾವುದೇ ವಿರೋಧವಿಲ್ಲದೆ ನಡೆದುಕೊಳ್ಳುತ್ತಿದ್ದರು. ಬ್ರಾಹ್ಮಣ ವರ್ಣದವರು ಪ್ರಾಯಃ ಅಡಂಬರವಿಲ್ಲದೆ ಪ್ರಶಾಂತವಾದ ಅಡವಿಗಳಲ್ಲಿ ಕುಟಿಯನ್ನು ಮಾಡಿಕೊಂಡು ನಿಃಸ್ಪೃಹ ವೃತ್ತಿಯಿಂದ ನಿವಾಸ ಮಾಡುತ್ತಿದ್ದರು ಹಾಗೂ ಜಗತ್ತಿನ ಕಲ್ಯಾಣಕ್ಕಾಗಿಯೇ ತಪಶ್ಚರಣೆ ಮಾಡುತ್ತಿದ್ದರು ಅವರು ತಮ್ಮ ವರ್ಣಧರ್ಮವಾದ ಷಟ್ಕರ್ಮಗಳಿಂದ ತಮ್ಮ ಮತ್ತು ಬೇರೆಯವರ ಶ್ರೇಯಸ್ಸನ್ನು ಸಾಧಿಸುತ್ತಿದ್ದರು. ಕ್ಷತ್ರಿಯರು ತಮ್ಮ ಸ್ವಧರ್ಮವಾದ ರಾಷ್ಟ್ರರಕ್ಷಣಾ ಕಾರ್ಯವನ್ನು ಪ್ರಮಾಣೇಕತೆಯಿಂದ ನಿರ್ವಹಿಸುತ್ತಿದ್ದರು. ಗೋಬ್ರಾಹ್ಮಣರ ಪಾಲನೆಯನ್ನೆ ತಮ್ಮ ಪವಿತ್ರ ಧ್ಯೇಯವೆಂದು ತಿಳಿದಿದ್ದರು. ರಾಷ್ಟ್ರಕ್ಕಾಗಿಯೇ ತಮ್ಮ ಶರೀರವೂ ಸಕಲ ಸಂಪತ್ತೂ ಇದೆಯೆಂದು ಅವರು ಭಾವಿಸುತ್ತಿದ್ದರು ಸಮಯಬಂದಾಗ ಸರ್ವಸ್ವವನ್ನೂ ತ್ಯಾಗಮಾಡಲು ಅವರು ಹಿಂದೆಗೆಯುತ್ತಿಲ್ಲ. ಧರ್ಮಯುದ್ಧವನ್ನವರು ತಮ್ಮ ಪವಿತ್ರ ಶ್ರೇಯಸ್ಸಾಧಕ ಸಾಧನವೆಂದು ತಿಳಿಯುತ್ತಿದ್ದರು— ' ಧರ್ಮ್ಯಾದ್ಧಿ ಯುದ್ಧಚ್ಛ್ರೇಯೋಽನ್ಯತ್ಕ್ಷತ್ರಿಯಸ್ಯ ನ ವಿದ್ಯತೆ | . ಆ ಕಾಲದ ಧರ್ಮಯುದ್ಧವು ಎಷ್ಟು ಪ್ರಮಾಣೇಕತನದಿಂದ ನಡೆಯುತ್ತಿತ್ತೆಂಬುದು ಪರದೇಶೀಯ ಪ್ರವಾಸಿಕನೊಬ್ಬನು ಬರೆದೀ ವಾಕ್ಯಗಳಿಂದ ಗೊತ್ತಾಗುತ್ತದೆ— ' ಭಾರತದಲ್ಲಿ ಯುದ್ಧರಂಗದಲ್ಲಿ ಮಹಾಸವಮನೇ ನಡೆಯುತ್ತಿದ್ದರೂ. ಅದಕ್ಕೆ ಒಂದೇಒಂದು ಮೈಲು ದೂರದ ಅರಣ್ಯದಲ್ಲಿ ನೆಲೆಸಿರುವ ಋಷಿಮುನಿಗಳು ಅಂಜಿಕೆಯಿಲ್ಲದೆ ಶಂಕೆಯಿಲ್ಲದೆ ಅವರವರ ತಪೋಧ್ಯಾನಾದಿ ಅನುಷ್ಠಾನಗಳನ್ನು ನೆರವೇರಿಸುತ್ತಿದ್ದರು ; ಬಳಿಯ ಹೊಲದಲ್ಲಿ ಕೃಷಿಕರು ಭೀತಿಯಿಲ್ಲದೆ ಉಳುತ್ತಿದ್ದರು ; ಇಷ್ಟುಹತ್ತಿರ ಯುದ್ಧವಾಗುತ್ತಿದ್ದರೂ ತಮ್ಮ ಮೇಲೆಲ್ಲಾದರೂ ಶಸ್ತ್ರಪ್ರಹಾರವಾದೀತೆಂಬ ಶಂಕೆಯು ಯಾರಿಗೂ ಇದ್ದಿಲ್ಲ . ಒಟ್ಟಾರೆ ಆ ದಿನಗಳ ಧರ್ಮಯುದ್ಧವು ಸನಾತನ ಬಲವಾದ ಯೋಧರಲ್ಲಿಯೇ ನಡೆಯುತ್ತಿತ್ತೇ ಹೊರತು ನಿರಪರಾಧಿಗಳಿಗೆ ಯಾವುದೇ ತರದ ಆತಂಕರೂಪವಾಗಿರುತ್ತಿದ್ದಿಲ್ಲ.

ಇದಕ್ಕೆ ವಿಪರೀತವಾಗಿ ಇಂದಾದರೋ ಯುದ್ಧದ ಫಲರೂಪವಾದ ಕ್ಲೇಶದಿಂದ ಇಡಿಯ ವಿಶ್ವದ ಯಾವುದೊಂದು ಪ್ರಾಣಿಯೂ ತಪ್ಪಿ ಉಳಿದಿಲ್ಲ. ಕಳೆದ ದ್ವಿತೀಯ ವಿಶ್ವಯುದ್ಧವು ಐದು ಸಾವಿರ ಮೈಲು ದೂರದಲ್ಲಿ ನಡೆಯುತ್ತಿದ್ದವರ್ಗ್ಯಾ, ಯುದ್ಧವು ನಮಗಿದೀಗ ಐದು ವರ್ಷದ ಮೇಲಾದರೂ, ಅದರಿಂದುತ್ಪನ್ನವಾದ ಅನ್ನವಸ್ತ್ರಾದಿಗಳ ಅಭಾವ, ಮಹಾರ್ಘತೆ, ಮುಂತಾದ ಕಷ್ಟಗಳು ಈವರೆಗೂ ಭಾರತವಾಸಿಗಳನ್ನು ಪೀಡಿಸುತ್ತವೆ. ಇದರಿಂದ ಇಂದಿನ ಯುದ್ಧಗಳು ಅಧರ್ಮ ಮತ್ತು ಸ್ವಾರ್ಥಿಗಳ ಕೋಲಾಹಲ ಸ್ವರೂಪವೆಂದು ನಿಶ್ಚಿತವಾಗುತ್ತದೆ.

ಅಂದಿನ ಋಷಿಯರೂ ಮಹಾಭಾರತದಲ್ಲಿ ವರ್ಣಿಸಿದ ತುಲಾಧಾರನಂತೆ ಅತ್ಯಂತ ಪ್ರಾಮಾಣಿಕರೂ ಅಲ್ಪತುಷ್ಟರೂ ರಾಷ್ಟ್ರೋನ್ನತಿಯ ದೃಷ್ಟಿಯಿಂದಲೇ ವ್ಯಾಪಾರವೃತ್ತಿ ಮಾಡುವವರೂ ಆಗಿದ್ದರು ಇದರಿಂದ ಆ ಕಾಲದಲ್ಲಿ ಎಲ್ಲಾ ಪದಾರ್ಥಗಳೂ ಉಚಿತವಾಗಿ ಅಲ್ಪ ಮೌಲ್ಯದಲ್ಲಿ ದೊರೆಯುತ್ತಿದ್ದುವು. ಇಂದಿನಂತೆ ಮಹಾರ್ಘತೆ, ವಸ್ತ್ರಗಳ ಕೃತ್ರಿಮ ಅಭಾವ ಇತ್ಯಾದಿಗಳಿಲ್ಲದ್ದರಿಂದ ಸಮಸ್ತ ಪ್ರಜೆಗಳೂ ಪೂರ್ಣಸುಖದಿಂದಿರುತ್ತಿದ್ದರು. ಇದೇ ರೀತಿ ಶೂದ್ರರೂ ತಮ್ಮ ಧರ್ಮವಾದ ಸೇವಾವೃತ್ತಿಗಳನ್ನು ಕರ್ತವ್ಯದೃಷ್ಟಿಯಿಂದ ಮಾಡುತ್ತಿದ್ದರು.

ಮೇಲೆ ಹೇಳಿದಂತೆ ನಾಲ್ಕು ವರ್ಣದವರು ' ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ' ಎಂಬ ಗೀತೋಕ್ತ್ಯನುಸಾರವಾಗಿ ಆಧ್ಯಾತ್ಮಿಕ ನಿಷ್ಠರಾಗಿ ತಮ್ಮ ತಮ್ಮ ಕೆಲಸವನ್ನು ಅಲಸ್ಯವಿಲ್ಲದೆ ಮಾಡುತ್ತಿದ್ದರು. ' ಹಾಗೂ ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ' ಎಂಬಂತೆ ಅನ್ಯೋನ್ಯ ಪ್ರೇಮಭಾವದಿಂದ ಅಭಿವೃದ್ಧಿ ಹೊಂದುತ್ತಿದ್ದರು. ಪ್ರಜೆಗಳ ಮೇಲೆ ಶಾಸನ ಮಾಡುವ ಆ ಕಾಲದ ಭಾರತದ ರಾಜನೀತಿಯೂ ಸಂಪೂರ್ಣ ಶ್ರುತಿಸ್ಮೃತ್ಯಾದಿ ಪ್ರಾಮಾಣಿಕ ಗ್ರಂಥಗಳಿಗೆ ಅಧೀನವಾಗಿರುತ್ತಿತ್ತು ರಾಜ್ಯವಿಧಾನವು ಶುಕ್ರಕಾಮಂದಾಕೀಯಾದಿ ನಿತ್ಯನುಸಾರ ನಡೆಯುತ್ತಿತ್ತು, ಪ್ರಾಯಃ ರಾಜರುಗಳು ನ್ಯಾಯಪ್ರಿಯರೂ ಗುಣಾನುರಾಗಿಗಳೂ, ಶಾಸ್ತ್ರಪಾರಂಗತರೂ ಆಗಿರುತ್ತಿದ್ದರು. ಇದರಿಂದ ಆ ಸಮಯದಲ್ಲಿ ಸಮಸ್ತ ಹಿಂದೂಸಾಮ್ರಾಜ್ಯವೂ ಸರ್ವಪ್ರಕಾರದಿಂದ ಸಂಪನ್ನವೃದ್ಧವಾಗಿ ಸುಖಶಾಂತಿಯು ನೆಲೆವೀಡಾಗಿರುತ್ತಿತ್ತು.

೩ ಭ್ರಾಂತದ ಅಧ್ಯನಿಕ ಸ್ಥಿತಿ— ಈಗಾದರೋ ಅಂತಹ ಧರ್ಮ ಮತ್ತು ಅಧ್ಯಾತ್ಮ ಸಂಸ್ಕೃತಿ ಪ್ರಧಾನವಾದ ಈ ಭಾರತದಲ್ಲಿ ಸರ್ವತ್ರ ಭೌತಿಕವಾದವೂ ನಾಸ್ತಿಕತೆಯೂ ಅರಿಷಡ್ವರ್ಗ ಸಂಪತ್ತಿಯೂ ಅಭಿವೃದ್ಧಿಗೊಂಡು ತತ್ಪರಿಣಾಮವಾಗಿ ಅಶಾಂತಿಯೂ ದುಃಖವೂ, ಅನ್ನವಸ್ತ್ರಾದಿಗಳ ಅಭಾವವೂ, ಅತಿವೃಷ್ಟಿಯೂ ಅನಾವೃಷ್ಟಿಯೂ ಪ್ರವಾಹವೂ ಭೂಕಂಪವೂ ಇತ್ಯಾದಿ ದೈವೀ ಉಪದ್ರವಗಳು ಕಂಡುಬರುತ್ತಿವೆ. ಜನತೆಯಲ್ಲಿ ವರ್ಗವಿಗ್ರಹ, ಪರಸ್ಪರ ಈರ್ಷ್ಯಾದ್ವೇಷಾದಿ ಬೆಳೆಯುತ್ತಿವೆ. ಮಾನವರೇ ಹಾನವರಂತೆ ಆಚರಿಸುತ್ತಿದ್ದಾರೆ ವರ್ಣಸಾಂಕರ್ಯವೂ ಕರ್ಮಸಾಂಕರ್ಯವೂ ಹೆಚ್ಚಿ ಕಲಪವಿತ್ರತೆ ಮುಂತಾದವು ದೂರವಾಗಿವೆ. ಪ್ರತಿಯೊಂದು ವರ್ಣ ಮತ್ತು ಆಶ್ರಮದ ಸ್ತ್ರೀಪುರುಷರು ಸ್ವೋಚಿತ ಕರ್ಮಗಳ ತ್ಯಾಗದಲ್ಲಿಯೇ ತಮ್ಮ ಗೌರವವನ್ನು ಕಾಣತೊಡಗಿರುವರು. ದೇಶದಲ್ಲಿ ಕೃಷಿ ವಾಣಿಜ್ಯಾದಿ ಉದ್ಯೋಗಗಳೂ ಪ್ರಾಮಾಣಿಕತೆಯಿಂದ ಮಾಡಲ್ಪಡದಿರುವ ಕಾರಣ ಮೇಲೆ ಹೇಳಿದಂತೆ ಅನ್ನವಸ್ತ್ರಾದಿಗಳ ಅಭಾವವು ಮತ್ತೂ ಹೆಚ್ಚಿತ್ತಿದೆ. ಮಹಾಪಾಪ ಕರ್ಮರೂಪವಾದ ಗೋಹತ್ಯೆ, ನರಹತ್ಯೆ ಮುಂತಾದ ಹಿಂಸಾಕೃತ್ಯಗಳು ಸಂಕಾಂದ ಮೂಲಕವೇ ಹೆಚ್ಚಾಗಿ ನಡೆಯುತ್ತಿವೆ. ಭಾರತದ ಬಾಹ್ಯಪರಿಸ್ಥಿತಿಯೂ ಸ್ವಲ್ಪವೂ ಕೃಪ್ತಿಕರವಾಗಿಲ್ಲ. ಇದರ ಅಂತರಾಷ್ಟ್ರೀಯ ನೀತಿಯು ನಿಶ್ಚಿತ ಪ್ರಮುಖ ದೇಶಗಳ ಸಹಕಾರವನ್ನು ಪಡೆಯುವುದಕ್ಕೆ ಸಹಾಯಕವಾಗಿಲ್ಲ. ಭಾರತದ ದಕ್ಷಿಣ ದಿಕ್ಕನ್ನು ಬಿಟ್ಟು ಉಳಿದ ದಿಕ್ಕುಗಳ ಎಲ್ಲಾ ಗಡಿಗಳಲ್ಲಿ ಕವ್ಯಾಸಿಸ್ತಂ ಮತ್ತಿನ್ನಿತರ ಭಯವು ಸಂಭಾವ್ಯವಾಗಿದೆ. ಕಾಶ್ಮೀರದ ಪ್ರಕರಣವನ್ನು ನೋಡುವಾಗ, ಪಾಕಿಸ್ತಾನದ ಬಾಂಧವ್ಯವು ಹೇಗಿದೆಯೆಂದೂ ಎಲ್ಲರಿಗೂ ಗೊತ್ತೇ ಇದೆ. ಒಟ್ಟಾರೆ ಸರ್ವತ್ರ ಅಶಾಂತಿಯು ಮುಗಿಲುಗಳೇ ಕವಿದುಕೊಂಡಿವೆ.

೪ ಇಂದಿನ ನೇತೃಗಳು— ದೇಶದ ಈಗಿನ ಕರ್ಣಧರರು ಪಾಶ್ಚಿಮಾತ್ಯ ವಿದ್ಯಾ ಸಂಸ್ಕೃತಿಯಿಂದ ಏಭೂಷಿತರೂ ಪೌರ್ವಾತ್ಯ ಸಂಸ್ಕೃತಿ-ಧರ್ಮಗಳಲ್ಲಿ ಸರ್ವಥಾ ಅನಭಿಜ್ಞರೂ ಆಗಿರುವುದು ಮಾತ್ರವೇ ಅಲ್ಲದೆ ಭಾರತೀಯ ಪ್ರಾಚೀನ ಪರಂಪರೆಯ ನಿಂದಕರೂ ಭಾರತವನ್ನು ಸರ್ವಪ್ರಕಾರದಿಂದ ಪಶ್ಚಿಮದೇಶದಂತೆಯೇ ಮಾಡಿಬಿಡಲು ಸಿದ್ಧರೂ ಆಗಿರುವರು. ಅವರಿಂದಲೇ ಅವರು ಭಾರತದ ಅಧ್ಯಾತ್ಮಪ್ರಧಾನವಾದ ಈಶ್ವರೀಯ ನಿಯಮ ನಿಬಂಧಗಳನ್ನು ಮುರಿದಿಕ್ಕಿ ಹೊಸ ಶಾಸನಗಳನ್ನು ಮಂಡಿಸುತ್ತಿರುವರು. ದೇಶದ ವಿಪತ್ಕಾರಣವನ್ನು ಗೊತ್ತು ಹಚ್ಚಿ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡುವ ಬದಲಿಗೆ ಇವರು ತಮ್ಮ ಸ್ವಬುದ್ಧಿತೆ ತೋರಿದಂತೆ, ಪ್ರಜೆಗಳ ಅಭಿನಾಶಾಯಕ್ಕೆ ವಿರೋಧವಾಗಿ ಕಾರ್ಯ ಮಾಡುತ್ತಿರುವರು. ಈ ರೀತಿ ಬಹುಸಂಖ್ಯಾತ ಪ್ರಜೆಗಳಿಗೆ ವಿರುದ್ಧವಾಗಿ ಈ ಅಂಗುಲೀಮೇಯರಾದ ನೇತೃಗಳು ವರ್ತಿಸುತ್ತಿರುವುದು ನಿಶ್ಚಯ. ವಿಶ್ವದ ಇತಿಹಾಸದಲ್ಲಂತೂ ಅತ್ಯಂತ ಅಶ್ಚರ್ಯದ ವಿಷಯವಾದರೂ ಇದನ್ನು ಪ್ರಜಾತಂತ್ರವೆಂದೇ ಘೋಷಿಸುತ್ತಿದ್ದಾರೆ!

೫ ಧರ್ಮಹೀನರಾಜ್ಯ— ಅನಾದಿಕಾಲದಿಂದ ಧರ್ಮಪ್ರಧಾನದೇಶವೆಂದು ಪ್ರಸಿದ್ಧವೆತ್ತ ಈ ಭಾರತವೀಗ ಸೆಕ್ಯುಲರ್ ಅರ್ಥಾತ್ ಧರ್ಮನಿರಪೇಕ್ಷ ರಾಜ್ಯವೆಂದು ಘೋಷಿತವಾಗಿದೆ. ಸೆಕ್ಯುಲರ್ ಶಬ್ದಕ್ಕೆ ಹಲವು ಅರ್ಥಗಳಿದ್ದಾಗ್ಯೂ ಯಾವುದೇ ಅರ್ಥದಿಂದ ನೋಡಿದರೂ ನಾಸ್ತಿಕ ರಾಜ್ಯವೆಂದೇನೂ ಸಿದ್ಧವಾಗಿಯೇ ಅಗುತ್ತದೆ ನಾಸ್ತಿಕ ರಾಜ್ಯದಲ್ಲಿ ನಿಶ್ಚಯವಾಗಿಯೂ ಸುಖ ಶಾಂತಿಯು ಇರಲಾರದು. ಏಕೆಂದರೆ 'ಯಥಾ ರಾಜಾ ತಥಾ ಪ್ರಜಾ' ಎಂಬ ನ್ಯಾಯದಂತೆ ಅಲ್ಲಿಯ ಜನತೆಯೂ ನಾಶವಾಗುವುದು. ಎಲ್ಲಿ ಪ್ರಜೆಗಳೆಲ್ಲರೂ ನಾಶವಾಗುವರೊ ಅಲ್ಲಿ ಉಚ್ಛೃಂಖಲೆಯೂ ಬಹು ನಾಸ್ತಿಕತೆಯೂ ಹೆಚ್ಚುವುದು. ಅದರಿಂದ ದೇಶದಲ್ಲಿ ದುಷ್ಕರ್ಮಗಳೂ ಅಪರಾಧಗಳೂ ಅಧಿಕವಾಗುವುವು. ಭಾರತದಲ್ಲಿಯೂ ಮೊದಲಿಗಿಂತ ಅಪರಾಧಗಳು ಹೆಚ್ಚಿವೆಯೆಂದು ಸರ್ಕಾರದ ವಿಜ್ಞಪ್ತಿಯಿಂದಲೇ ಸಿದ್ಧವಾಗುತ್ತದೆ. ಎಲ್ಲಿ ಈಶ್ವರನ ಮೇಲೂ ಪರಲೋಕದ ಮೇಲೂ ಶ್ರದ್ಧಾಭಯಗಳು ಕಡಿಮೆಯಾಗುವುವೋ ಅಲ್ಲಿ ಅಪರಾಧದ ಮನೋವೃತ್ತಿಯು ಹೆಚ್ಚಿಯೇ ಹೆಚ್ಚುವುದು. ಅಲ್ಲದೆ ಭಾರತವೆಂದೂ ಭೌತಿಕಪ್ರಧಾನ ಧರ್ಮಹೀನ ದೇಶವಾಗಿಂಲೇ ಇಲ್ಲ. ವಿಶ್ವದಲ್ಲೆಲ್ಲ ಒಂದೆಂಡು ರಾಜ್ಯದ ಹೊರತು ಉಳಿದ ಯಾವ ರಾಜ್ಯವೂ ಧರ್ಮರಹಿತವಾಗಿಲ್ಲ. ಭಾರತದಲ್ಲಾದರೋ ನೂರಕ್ಕೆ ೯೯ ಜನರು ಈಗಲೂ ನಿಶ್ಚಯವಾಗಿ ಆಸ್ತಿಕರೇ ಇರುವರು. ಹೀಗಿರುವಾಗ ರಾಜ್ಯವು ನಾಸ್ತಿಕವಾಗಿ ಹೇಗಿರಬಲ್ಲದು? ಮತ್ತು ಇದನ್ನು ಪ್ರಜಾಸಮ್ಮತಿಪೂರ್ಣ ರಾಜ್ಯವೆಂದು ಹೇಗೆ ಹೇಳಬಹುದು? ಒಂದೇ ಒಂದು ಪಕ್ಷದ ಕೆಲವೇ ನೇತೃಗಳು ತಮ್ಮ ಸ್ವಕೀಯ ದುಂಭಿವಾಗ್ಯದಿಂದ ಸಮಸ್ತ ರಾಜ್ಯದ ಸ್ವರೂಪವನ್ನು ಧರ್ಮರಹಿತವನ್ನಾಗಿ ಮಾಡಿದರೆ ಅದೆಂದಾದರೂ ನ್ಯಾಯಸಂಗತವಾದೀತೆ? ಶಾಸ್ತ್ರದೃಷ್ಟ್ಯಾ ಧರ್ಮ ಈಶ್ವರಾದಿ ಶೂನ್ಯವಾದ ನಾಸ್ತಿಕ ರಾಜ್ಯದ ಮೇಲೆ ದೈವೀ ಕೃಪೆಯು ಹೇಗೆ ಪ್ರಾಪ್ತವಾದೀತು? ಇದೇ ಕಾರಣದಿಂದ ದೇಶದಲ್ಲೀಗ ದೈವೀ ಕೋಪರೂಪವಾದ 'ಅತಿವೃಷ್ಟಿರನಾವೃಷ್ಟಿರ್ವ ಮೂಷಕಾಃ ಶಲಭಾಃ ಶುಕಾಃ | ಆತ್ಮಪನ್ನಾಶ್ಚ ರಾಜಾನಃ ಷಡೇತೇ ಈತಯಃ ಸ್ಮೃತಾಃ' ಎಂಬ ಆರು ಈತಿಬಾಧೆಗಳು ದಿನದಿನಕ್ಕೆ ಹೆಚ್ಚುತ್ತವೆ. ಆದ್ದರಿಂದ ಇನ್ನಾದರೂ ಭಾರತದ ನೇತೃಗಳು ಚೆನ್ನಾಗಿ ವಿಚಾರಮಾಡಿ ಭಾರತದ ರಾಜ್ಯವನ್ನು ಧರ್ಮನಿಯಂತ್ರಿತ ರಾಜ್ಯ ಅರ್ಥಾತ್ ರಾಮರಾಜ್ಯವನ್ನಾಗಿ ಮಾರ್ಪಡಿಸಿದರೆ ಅದರಿಂದ ಒಳಿತಾದೀತು.

೬ ಧರ್ಮದ ಮೇಲೆ ಕೈಮಾಡುವುದು— ಹೇಳಲಿಕ್ಕೇನೋ ಭಾರತವು ಧರ್ಮನಿರಪೇಕ್ಷವಾದುದೆಂದೂ ಎಲ್ಲಾ ಧರ್ಮಾವಲಂಬಿಗಳಿಗೂ ಅವರವರ ಧರ್ಮ ಮತ್ತು ಉಪಾಸನೆ ಮಾಡಲು ಪೂರ್ಣ ಸ್ವಾತಂತ್ರ್ಯವಿದೆಯೆಂದೂ ಸಾರಲಾಗುತ್ತಿದೆ. ಆದರೆ ಕೇವಲ ಹಿಂದೂಧರ್ಮ ಮತ್ತದರ ಸಾಮಾಜಿಕ ವಿಷಯಗಳ ಮೇಲೆಯೇ ಕ್ರಾಂತಿಕಾರೀ ಕಾನೂನುಗಳ ಮೂಲಕ ಭಯಂಕರವಾದ ಹಸ್ತಕ್ಷೇಪ ಮಾಡುತ್ತಿರುವುದು ಅತ್ಯಂತ ಶೋಚನೀಯ. ಧರ್ಮನಿರಪೇಕ್ಷ ಸರಕಾರವು ಎಲ್ಲಾ ಧರ್ಮಗಳ ವಿಷಯದಲ್ಲಿ ತಟಸ್ಥವಾಗಿರಬೇಕೇಹೊರತು ಯಾವುದೇ ಒಂದು ಧರ್ಮದ ವಿಷಯದಲ್ಲಿ ತದ್ಧರ್ಮೀಯ ಪ್ರಜೆಗಳ ತೀವ್ರ ವಿರೋಧವಿದ್ದಾಗ್ಯೂ ಸುಧಾರಣೆಗಳ ನೆಪದಿಂದ ಅನುಚಿತ ಪ್ರಹಾರಗಳ್ಳುವುದು ಉಚಿತವೆನಿಸದು. ಹೀಗೆ ಮಾಡಿದಲ್ಲಿ ಅನ್ಯ ಧರ್ಮಾವಲಂಬಿಗಳಿಗೆ ಸರಕಾರವು ಎಂದಾದರೊಮ್ಮೆ ತಮ್ಮ ಧರ್ಮದ ಮೇಲೂ ಪ್ರಹಾರ ಮಾಡಬಹುದೆಂದು ಅವಿಶ್ವಾಸ ಹುಟ್ಟುವುದು ಸ್ವಾಭಾವಿಕವಾದುದು. ಈ ರೀತಿ ಸಮಸ್ತ ಪ್ರಜೆಗಳ ಸಂಬುಗೆಯನ್ನು ಕಳೆದುಕೊಳ್ಳುವುದು ಎಷ್ಟರವರೆಗೆ ಶ್ರೇಯಸ್ಕರವಾದೀತು?

ಇದರಂತೆಯೇ ಸರ್ವ ಪ್ರಜೆಗಳ ಪೂರ್ಣ ವಿರೋಧವಿದ್ದಾಗ್ಯೂ ಜನತಂತ್ರ ಭಾರತದಲ್ಲಿ ಧರ್ಮಸಂಸ್ಕೃತಿಗಳನ್ನು ಉಚ್ಛೇದಿಸುವ ಹಿಂದೂಕೋಡು ಬಿಲ್ಲನ್ನು ತರಲು ಸಂಕಾದ ಮೂಲಕ ಪ್ರಯತ್ನ ನಡೆಯುತ್ತಿರುವುದು ಅತ್ಯಂತ ಖೇದಕರ. ಧರ್ಮದಲ್ಲಿ ಒಡಸಹಿತ ಮಾರ್ಪಾಡು ಮಾಡುವ ಇಂತಹ ಕಾನೂನನ್ನು ಸಮಸ್ತ ಧರ್ಮಾಚಾರ್ಯರು ಮತ್ತು ಧರ್ಮಭಿಜ್ಞರಾದ ವಿದ್ವಾಂಸರು ಅಭಿಪ್ರಾಯ ತೆಗೆದುಕೊಳ್ಳದೆ ಧರ್ಮ ವಿಷಯದಲ್ಲಿ ತೀರ ಅನಭಿಜ್ಞರೂ ಅನಧಿಕಾರಿಗಳೂ ಆದ ಶಾಸನ ಸಭಾಸದಸ್ಯರ ಸಮರ್ಥನೆಯ ಒಲದಿಂದ, ಇಂತಹ ಕಾನೂನನ್ನು ಚರ್ಚಿಸಲು ಅನಧಿಕೃತವಾದ ಶಾಸನ ಸಭೆಯಲ್ಲಿ ತಂದಿರುವುದು ಸರ್ವಥಾ ನಿಂದನೀಯವಾದದ್ದು. ಕೆಲ ನೇತೃಗಳಂತೂ ಹಿಂದೂಕೋಡ್ ಬಿಲ್ಲಿನ ವಿರೋಧಿಗಳಿಗೆ ಅನೇಕ ಪ್ರಕಾರದ ಭರ್ತ್ಸನೆ ಮಾಡುತ್ತಿರುವರಲ್ಲದೆ ಭಯವನ್ನೂ ತೋರಿಸುತ್ತಿರುವುದು ಅತೀವ ದುಃಖಕರ. ಧರ್ಮನಿರಪೇಕ್ಷ ರಾಜ್ಯವು ಈರೀತಿ ಕೇವಲ ಹಿಂದೂಜನರ ಧಾರ್ಮಿಕ ಸಾಮಾಜಿಕ ಜೀವನದಲ್ಲಿ ಕೈಹಾಕುವುದು ಸರ್ವಥಾ ಅಸಹ್ಯವಾದುದು. ದೇಶದ ಬಾಹ್ಯಾಭ್ಯಂತರ ಪರಿಸ್ಥಿತಿಗಳು ಅತ್ಯಂತ ಕೆಟ್ಟುಹೋಗಿರುವುದರಿಂದ ಹೇಗಾದರೂ ಪ್ರಜೆಗಳನ್ನು ಸಂತೋಷಗೊಳಿಸುವುದು ಬಹಳ ಅವಶ್ಯವಾಗಿರುವಾಗ ಇಂತಹ ವಿವಾದಾಸ್ಪದ ಕಾನೂನುಗಳಿಂದ ಜನತೆಯಲ್ಲಿ ಇನ್ನಷ್ಟು ಅಸಂತೃಪ್ತಿಯನ್ನು ಬೆಳೆಸಿದರೆ ದೇಶಕ್ಕದಾವ ಲಾಭವಾದೀತು? ಆದ್ದರಿಂದ ಈಗಲಾದರೂ ನೇತೃಗಳು ತಮ್ಮ ಹಠಾಗ್ರಹವನ್ನು ತ್ಯಜಿಸಿ ಇಂತಹ ಹಾನಿಕರವಾದ ಹಿಂದೂಕೋಡು ಬಿಲ್ಲನ್ನು ಬೇಗ ತೆಗೆದುಹಾಕಿ ದೇಶದಲ್ಲಿ ಸಂಘಟನೆಯನ್ನು ಬಲಪಡಿಸಲಿ; ಜತಗೇ ಸನಾತನಧರ್ಮಿಗಳೂ ಕೂಡ ಇನ್ನೂ ಹೆಚ್ಚು ಒಂದುಗೂಡಿ ಈ ಹಿಂದೂಕೋಡನ್ನು ತೆಗೆದುಹಾಕಿಸಲು ಪ್ರಯತ್ನಿಸಬೇಕಾದುದು ಕರ್ತವ್ಯ.

೭ ರಾಮರಾಜ್ಯ— ಭಾರತದಲ್ಲಿ ಸಹಸ್ರಾಧಿಕ ರಾಜರುಗಳು 'ರಾಜ್ಯ'ವಾಳಿ ಹೋಗಿದ್ದರೂ ಎಲ್ಲಾ ಜನರೂ ರಾಮರಾಜ್ಯವನ್ನೇ ಸ್ಮರಿಸುತ್ತಾರೆ; ಹಾಗೂ ಇಚ್ಛಿಸುತ್ತಾರೆ; ರಾಮರಾಜ್ಯದಲ್ಲಿ— 'ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ | ನಾನಾಹಿತಾಗ್ನಿರ್ನಾವಿದ್ವಾನ್ ನ ಸ್ವೈರಿಣ್ಯೇ ಕುತಃ ||' ಎಂಬಂತೆ ಎಲ್ಲರೂ ಸ್ವಧರ್ಮನಿಷ್ಠರೂ ವಿಕರ್ಮದೂರರೂ ಪೂರ್ಣ ಆಸ್ತಿಕರೂ ಸುಖಿಗಳೂ ಆಗಿರುತ್ತಿದ್ದರು. ಎಲ್ಲಿಯೂ ಯಾವುದೇ ಜಗಳ ದೋಷಗಳೂ ಪಕ್ಷಪಾತಗಳೂ ದುಃಖಗಳೂ ಇದ್ದಿಲ್ಲ.

ಈಗ ಭಾರತಕ್ಕೆ ಸ್ವಾತಂತ್ರ್ಯವಾದರೂ ಸಿಕ್ಕಿದೆ : ಆದರೆ ಇನ್ನೂ ಸುರಾಜ್ಯ – ರಾಮರಾಜ್ಯಗಳು ಬೊರೆತಿಲ್ಲ ದೇಶದ ಉಚ್ಚ ನೇತೃಗಳ ಅಭಿಲಾಷೆಯಾದರೋ ರಾಮರಾಜ್ಯ ಸ್ಥಾಪಿಸಬೇಕೆಂದೇ ಇದ್ದಿತು ; ಆದರೆ ಈಗ ಸಡೆಯುತ್ತಿರು ವ ರಾಜ್ಯ ಭಾರವನ್ನು ಕಾಣುವಾಗ ರಾಮರಾಜ್ಯವು ಇನ್ನೂ ದೂರವಿದೆಯೆಂದು ಭಾಸವಾಗುತ್ತದೆ : ಆದ್ದರಿಂದ ಸನಾತನಧರ್ಮಾನುಯಾಯಿಗಳಾದ ಜನರೆಲ್ಲರೂ ರಾಮರಾಜ್ಯ ಸ್ಥಾಪನೆಗಾಗಿ ಸರ್ವತೋಮುಖೇನ ಪ್ರಯತ್ನಮಾಡಬೇಕು.

೮ ರಾಮರಾಜ್ಯದ ಆದರ್ಶ—

೧ ಸರ್ವಸಾಧಾರಣವಾಗಿ ಹಿತ, ಶಾಂತಿ ಮತ್ತು ಸೌಖ್ಯವನ್ನು ಎದುರಿಗಿಟ್ಟುಕೊಂಡು ಪಕ್ಷಪಾತವಿಲ್ಲದೆ ದೇಶವಾಸಿಗಳೆಲ್ಲರ ಧರ್ಮ, ಸಂಸ್ಕೃತಿ, ಸಭ್ಯತೆ, ಹಿತ ಪತ್ತು ನ್ಯಾಯರಕ್ಷಣೆಯಾಗುವುದು

೨ ಪ್ರತಿಯೊಬ್ಬ ಸಂಸಾರಿಯರಿಗೂ ತಮ್ಮ ಬೆಲೆಯಲ್ಲಿ ಅನ್ನ, ಬಟ್ಟೆ, ಔಷಧ ಮನೆ ಮತ್ತು ನ್ಯಾಯವೂ ಲಭಿಸುವುದು.

೩ ರಾವುದೇ ರೀತಿಯು ಭ್ರಷ್ಟಾಚಾರವಿರಲಾಗದು.

೪ ಪ್ರತಿಯೊಬ್ಬ ರಾಜ್ಯಾಧಿಕಾರಿಯೂ ವಿಶ್ವಾಸಿಗಳೂ, ಪಕ್ಷಪಾತರಹಿತನೂ ಆಗಿದ್ದು, ಎಲ್ಲಾ ಪಂಗಡದ ಹಿತವನ್ನುಂಟು ಮಾಡುವನು. ಪ್ರತಿಯೊಂದು ಪಂಗಡವೂ ಇನ್ನೊಂದಕ್ಕೆ ಪೂರಕವಾಗಿರುವುದು.

೫ ಯಾವಾದರೂ ಸ್ವಧರ್ಮದಿಂದ ಭ್ರಷ್ಟಂಆದರೆ ರಾಜ್ಯಾಧಿಕಾರಿಯು ಆ ಪಂಗಡದ ವಿನಾಶವನ್ನು ಮಾಡದೆ, ಅದರ ದುರ್ಗುಣಗಳನ್ನು ಹೋಗಲಾಡಿಸಲು ಯತ್ನಿಸುವನು

೬ ಹೊರಗಿನ ಜಾಕಚಕ್ಯಕ್ಕೆ ಬಲಿಬೀಳದೆ, ವಿಚಾರವಿಮರ್ಶೆಯಿಲ್ಲದೆ ವಿದೇಶೀಯ ರೀತಿನೀತಿಗಳಿಗೆ ಸಿಲುಕದೆ, ಭಾರತೀಯತೆಯ ಅಧಾರದ ಮೇಲೆ ಸ್ವಾಭಾವಿಕವಾಗಿರುವ ಕೃಷಿ, ಉದ್ಯೋಗ, ವಾಣಿಜ್ಯ ಮತ್ತ ಪಶುಪಾಲನೆಗಳನ್ನು ಹೆಚ್ಚಿಸಲಾಗುವುದಲ್ಲದೆ, ಜೀವಿಕೆಯಿಲ್ಲದಿರುವನಿಗೆ ಯೋಗ್ಯತಾನುಸಾರವಾಗಿ ಜೀವಿಕೆಯನ್ನೂ ಕಲ್ಪಿಸಲಾಗುವುದು.

೭ ಜನತಂತ್ರವು ಸುದೃಢವೂ, ಪ್ರತಿಷ್ಠಿತವೂ ಆಗಿ ಜನಗಳಭಿಪ್ರಾಯವನ್ನು ರಾಜ್ಯಾಧಿಕಾರಿಯು ಉಚಿತವಾಗಿ ಆದರಿಸುವನು

೮ ವ್ಯಕ್ತಿಗತವಾದ ಅಧಿಕಾರವನ್ನನುಸರಿಸಿ, ವ್ಯಕ್ತಿಗತವಾದ ಕರ್ತವ್ಯ ಮತ್ತು ಧರ್ಮಪಾಲನೆಯ ಮೇಲೆ ಹೆಚ್ಚಿನ ಭಾರವಿಡಲಾಗುವುದು ಜನರು ಧರ್ಮಪಾಲನೆ ಮಾಡಿ ಕೇವಲ ಲೌಕಿಕ ಅಥವಾ ಪಾರಲೌಕಿಕವಾದ ಉನ್ನತಿಯನ್ನು ಪಡೆಯಬಹುದು ಮತ್ತು ಸರ್ವ ಕಲ್ಯಾಣವನ್ನೂ ಪಡೆಯಬಹುದಲ್ಲದೆ ಪ್ರಜೆಗಳಲ್ಲಿ ಅಭಯ ಭಾವನೆಯುಂಟಾಗುವುದು

೯ ಸಮಾಜದ ಅಧಮ ಜನತೆಯ ಸೇವೆಯು ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ತಡೆಯಾಗದೆ, ಅದು ಸ್ಫೂರ್ತಿಗೆ ಪೂರ್ಣವಾಗಿ ಸಹಾಯಕವಾಗಬಹುದು.

13 ಸರ್ವಶ್ರೇಷ್ಠ ತತ್ವವಾದ ವಸ್ತು ವೈಶ್ವಿಕತತ್ವವಾದರೆ ಪರಸ್ಪರ ವಿರುದ್ಧವಾಗದ್ದೆ, ಎಂಡೂ ಸೇರಿಯೇ ದೇಶ ಮತ್ತು ರಾಜ್ಯದ ಕಲ್ಯಾಣವನ್ನು ರಕ್ಷಣ ಮಾಡುವುದು.

೯ ರಾಮರಾಜ್ಯದ ಉದ್ದೇಶ —

೧ ಸರ್ವತ್ರ ಶಾಂತಿಪೂರ್ಣವಾದ ವೈಧ ಉಪಾಯಗಳಿಂದ ಅಖಂಡ-ಭಾರತವನ್ನು ಸ್ಥಾಪಿಸುವುದು.

೨ ಭಾರತ ಭೂಮಿಯಲ್ಲಿ ಚಕ್ರವರ್ತೀ ರಾಜ್ಯದ ಸ್ಥಾಪನೆಯ ಉದ್ದೇಶದಿಂದ ಕೇಂದ್ರಿಯ ಪುರಾತನದ ಪ್ರಭುತ್ವವನ್ನು ಸರ್ವತ್ರ ಭಾರತದಲ್ಲಿ ಅಕ್ಷುಣ್ಣವಾಗಿ ಇರಿಸುವುದು ಪಂಗಡಲೇ ಸಂಭವವಾದಷ್ಟು ಮಟ್ಟಿಗೆ ಪ್ರಾಂತೀಯ ಸ್ವಾಧೀನತೆಯನ್ನು ಸ್ಥಾಪಿಸುವುದು.

೩ ವಿಧಾನದ ಮೂಲಕ ಸ್ವೀಕರಿಸಲ್ಪಟ್ಟ ಮೂಲಭೂತ ಅಧಿಕಾರಗಳನ್ನು ಕಿರ್ಚವೇನೂ ಇಲ್ಲದೆ ಅಖಂಡವಾಗಿ ಸ್ಥಾಪಿಸುವುದು

೪ ದೇಶದಲ್ಲಿ, ಭಾರತೀಯ ಸಿದ್ಧಾಂತಗಳು ಅಧಾರವಾಗಿರುವಂತಹ, ಶಾಸಕರು ಮತ್ತು ಶಾಸಿತರೆಲ್ಲರ ಮೇಲೆ ವ್ಯಾಪಕಾರ್ಥದಲ್ಲಿ ಧರ್ಮದ ನಿಯಂತ್ರಣವಿರುವಂತಹ, ರಾಜನೀತಿ, ಅರ್ಥನೀತಿ, ಶಿಕ್ಷಣನೀತಿ ಮುಂತಾದುವು ಧರ್ಮಭಾವನೆಯಿಂದ ಅನುವ್ರಾಣಿತವಾಗಿರುವಂತಹ ಸ್ವರಾಜ್ಯವನ್ನು ಸ್ಥಾಪಿಸುವುದು.

೫ ವಿಶ್ವದ ಹಿತವನ್ನೂ ಶಾಂತಿಯನ್ನೂ ಗಮನದಲ್ಲಿಟ್ಟುಕೊಂಡು ಭಾರತ ರಾಷ್ಟ್ರದ ಸರ್ವವಿಧ ಅಭ್ಯುದಯಕ್ಕೆ ಪ್ರಯತ್ನಿಸುವುದು, ವಿದೇಶಗಳೊಂದಿಗೆ ಸಂಬಂಧ ಬೆಳೆಸುವುದು ಮತ್ತು ಅಲ್ಲಿಯ ದೂತಾವಾಸಗಳನ್ನು ಭಾರತೀಯ ಸಂಸ್ಕೃತಿಯ ಪ್ರತೀಕಗಳನ್ನಾಗಿ ಮಾಡುವುದು.

೬ ಎಲ್ಲಾ ಪ್ರಾಣಿಗಳು ಪರಮೇಶ್ವರನ ಸಂತಾನಗಳು ಮತ್ತು ಪರಮೇಶ್ವರನ ಅಂಶಗಳೆಂಬ ಭಾವನೆಯೊಂದಿಗೆ ಎಲ್ಲರ ಸಹಜ ಬಾಂಧವ್ಯ, ಸಹಾನುಭೂತಿ ಹಾಗೂ ಸ್ವಾತಂತ್ರ್ಯವನ್ನು ಉದ್ಬೋಧಗೊಳಿಸುವುದು.

೭ ಜಾತಿ, ಸಂಪ್ರದಾಯ ಹಾಗೂ ಧರ್ಮಗತ ಪಕ್ಷಪಾತವಿಡದೆ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಮೂಹದ ರಾಜನೈತಿಕ ಹಾಗೂ ಆರ್ಥಿಕ ಅಭ್ಯುದಯಕ್ಕೆ ಪ್ರಯತ್ನಿಸುವುದು.

೮ ಶ್ರಮಿಕ, ಕೃಷಕ, ವ್ಯಾಪಾರೀ, ಶಿಲ್ಪೀ ಮತ್ತು ಬುದ್ಧಿಜೀವಿ ವರ್ಗಗಳಲ್ಲಿ ಪರಸ್ಪರ ಸಹಕಾರ ಮತ್ತು ಸದ್ಭಾವನೆಯ ಭಾವಗಳನ್ನು ಹುಟ್ಟಿಸುವುದು ವ್ಯಾಪಾರದಲ್ಲಿ ಪ್ರಾಮಾಣಿಕತೆಯ ಭಾವವನ್ನು ಹುಟ್ಟಿಸುವುದು ಹಾಗೂ ಧನಿಕರಲ್ಲಿ ಸ್ವಾರ್ಥತ್ಯಾಗದ ಭಾವನೆಯನ್ನು ತರುವುದು, ಮೂಲಿಕಾಲ್ಷಿಯೂ, ಕೂಲಿಗಾರಂಲ್ಲಿಯೂ ಸಹಭಾವನೆಯನ್ನೂ ಸಮತ್ವವನ್ನೂ ಸ್ಥಾಪಿಸುವುದು, ಪಾಶ್ಚಾತ್ಯ ಉದ್ಯೋಗೀಕರಣದ ದೋಷಗಳ ದೆಸೆಯಿಂದ ದೇಶವನ್ನು ತಪ್ಪಿಸುವುದು ಹಾಗೂ ಉದ್ಯೋಗಗಳನ್ನು ವಿಕೇಂದ್ರೀಕರಣಗೊಳಿಸಿ ಗ್ರಾಮ ಮತ್ತು ಗೃಹ ಉದ್ಯೋಗಗಳಿಗೆ ಪ್ರೋತ್ಸಾಹಕೊಡುವುದು, ವಾಣಿಜ್ಯವ್ಯವಹಾರವನ್ನು ಸೀಮಿತವಾಗಿಟ್ಟು ವಸ್ತುಗಳ ಆದಾನಪ್ರದಾನವನ್ನಾಗಲಿ ವಿನಿಮಯದ ಪದ್ಧತಿಯನ್ನಾಗಲಿ ನಡೆಯಿಸುವುದು ವ್ಯಾಪಾರಿಗಳಿಗೆ ಬೆಳೆಯ ರೂಪದಲ್ಲಿ ಕಂದಾಯವನ್ನು ತೀರಿಸುವ ಸೌಕರ್ಯವೊದಗಿಸುವುದು, ಬೇಸಾಯ, ಉದ್ಯೋಗಾದಿಗಳಲ್ಲಿ ಭಾರತೀಯ ಸಾಧನಗಳ ಮೇಲೆ ಅಧಿಕ ಗಮನ ಕೊಡುವುದು ಹಾಗೂ ಅವುಗಳ ಅನುಸಂಧಾನ, ಪ್ರಸಾರ ಮತ್ತು ವಿಕಾಸಕ್ಕೆ ವ್ಯವಸ್ಥೆ ಮಾಡುವುದು.

೯ ಉಣ್ಣುವ, ಉಡುವ, ಇಡುವ ಶಿಕ್ಷಣ ಮತ್ತು ಆರೋಗ್ಯ ಸುಧಾರಣೆಯ ಎಲ್ಲ ಸೌಕರ್ಯಗಳನ್ನು ಕೊಡುವುದು, ಖಾದ್ಯ ಪದಾರ್ಥಗಳ ಶುದ್ಧತೆಗೆ ಬಲವಾದ ವ್ಯವಸ್ಥೆಯಿಡುವುದು, ಕೃತ್ರಿಮ ಅನಶ್ಯಕತೆಗಳನ್ನು ಕಡಿಮೆ ಮಾಡುವುದು, ಜೀವನದಲ್ಲಿ ಸರಳತನ ಹಾಗೂ ಸಂತೃಪ್ತಿಯ ಭಾವವನ್ನು ತರುವುದು

೧೦ ದನ, ಎಮ್ಮೆ ಮುಂತಾದ ಪಶುಗಳ ಪಾಲನೆ – ಪರಿವರ್ಧನಾದಿಗಳ ಮೂಲಕ ಆರೋಗ್ಯಕ್ಕಾಗಿ ಘೃತ-ದುಗ್ಧಾದಿಗಳನ್ನೂ, ಕೃಷಿಗಾಗಿ ಎತ್ತುಗಳನ್ನೂ ಸಾಕಷ್ಟು ಗೊಬ್ಬರವನ್ನೂ ಒದಗಿಸುವುದು.

೧೧ ನ್ಯಾಯವನ್ನು ಸುಲಭವಾಗಿಯೂ ನಿಷ್ಪಕ್ಷವಾಗಿಯೂ ಮಾಡುವದು

೧೨ ಅಂತ್ಯಜರ ಮತ್ತು ಇತರ ಹಿಂದುಳಿದ ಪಂಗಡಗಳ ಸ್ಥಿತಿಯನ್ನು ಅವರ ಪರಂಪರಾನುಸಾರವಾಗಿ ಸುಧಾರಿಸುವುದು, ನಡಿಗೆ-ತೊಡಿಗೆ, ಶಿಕ್ಷಣ ಹಾಗೂ ಆರೋಗ್ಯಕ್ಕೆ ವಿಶೇಷ ಸೌಕರ್ಯಗಳನ್ನು ಕೊಡುವುದು, ಅವರಿಗೆ ಉಪಯುಕ್ತವಾದ ಉಚ್ಚಾತ್ಯುಚ್ಚ ಪದವಿಯನ್ನು ಕೊಡುವುದು, ಸಮಾಜದ ದೃಷ್ಟಿಯಲ್ಲಿ ಅವರ ಮಾನವನ್ನು ಹೆಚ್ಚಿಸುವುದು, ಜೀವನೋಪಾಯಗಳನ್ನು ಅಪಹರಿಸಿಕೊಳ್ಳದೆ ಚರ್ಮಗಳ ವ್ಯಾಪಾರಗಳನ್ನೂ ಬೇರೆ ಬೇರೆ ತದುಪಯೋಗಿ ಶಿಲ್ಪಗಳನ್ನೂ ಅವರಿಗೆ ಕೊಡುವುದು.

೧೩ ಶಿಕ್ಷಣದಲ್ಲಿ ಆಧ್ಯಾತ್ಮಿಕ, ಮಾನಸಿಕ ಮತ್ತು ಶಾರೀರಕ – ಈ ಮೂರಾನ್ನೂ ಸಮಾನವಾಗಿಡುವುದು, ವ್ಯಾಯಾಮ ಶಾಲೆಗಳಿಗೆ ವ್ಯವಸ್ಥೆ ಮಾಡುವುದು ಮತ್ತು ಭೌತಿಕ ಜೀವನದೊಂದಿಗೇ ನೈತಿಕ ಜೀವನದ ಪಟ್ಟವನ್ನೂ ಧಾರ್ಮಿಕ ಸಂಸ್ಥೆಗಳ ಸಹಾಯದಿಂದ ಉಚ್ಚವಾಗಿ ಮಾಡಲು ಪ್ರಯತ್ನಿಸುವದು.

೧೪ ಶಾಸನದಲ್ಲಿ ಆಧುನಿಕ ದೋಷಗಳಿಂದ ಬಿಡಲ್ಪಟ್ಟ ನಿರ್ವಾಚನ ಪದ್ಧತಿಯನ್ನು ತರುವುದು. ಗ್ರಾಮಗಳನ್ನು ಶಾಸನಕ್ಕೆ ಆಧಾರವಾಗಿ ಮಾಡುವುದು ಅವುಗಳಲ್ಲಿ ಬಂಧುತ್ವದ ಪ್ರಾಚೀನ ಮಹತ್ವವನ್ನು ಜಾಗರಿತಗೊಳಿಸುವುದು, ಪಂಚಾಯಿತಿಗಳನ್ನು ಹಳೆಯ ರೀತಿಯಲ್ಲಿ ಸಂಘಟಿತಗೊಳಿಸುವುದು. ರಾಜ್ಯವನ್ನು ಜನಮತಕ್ಕೆ ಅನುಕೂಲ ಮಾಡಿಕೊಂಡು ಜನತೆಯಲ್ಲೂ ರಾಜ್ಯದಲ್ಲೂ ಒಗ್ಗಟ್ಟನ್ನಿರಿಸುವುದು.

೧೫ ಹಿಂದಿಯನ್ನು ರಾಷ್ಟ್ರಭಾಷೆ ಮಾಡುವುದು, ಜತೆಗೇ ಪ್ರಾಂತೀಯ ಭಾಷೆಗಳ ರಕ್ಷಣೆ ಮತ್ತು ಉನ್ನತಿಗೊಳಿಸುವುದಲ್ಲದೆ ಪ್ರಾಚೀನ ಭಾಷೆಗಳ ಪಠನವಾಚನಗಳನ್ನು ಅಧಿಕವಾಗಿ ಪ್ರಚಾರ ಮಾಡುವುದು.

೧೬ ಪ್ರಾಚೀನ ಭಾರತೀಯ ಕಲೆಗಳ, ವಿದ್ಯೆಗಳ ಹಾಗೂ ವಿಜ್ಞಾನದ ಉದ್ಧಾರವನ್ನು ದೇಶೀ ಚಿಕಿತ್ಸಾ ಪದ್ಧತಿಯ ಸಂರಕ್ಷಣವನ್ನೂ ಪ್ರಚಾರವನ್ನೂ ಉನ್ನತಿಯನ್ನೂ ಮಾಡುವುದು.

೧೭ ಮಾತೃಶಕ್ತಿಯ ಗೌರವವನ್ನು ಜಾಗರಿತಗೊಳಿಸುವುದು

೧೮ ಎಲ್ಲಾ ಮಂಗಡಾಳಿ ಧಾರ್ಮಿಕ ವಿಶ್ವಾಸಗಳನ್ನು ರಕ್ಷಿಸುವುದು, ಆನಿ ಶವಂ ಧರ್ಮದಂತೆ ಜೀವನವನ್ನು ಸಾಗಿಸಲಿಕ್ಕೆ ಸರ್ವರಿಗೂ ಸ್ವಾತಂತ್ರ್ಯವನ್ನೀಯುವುದು, ಯಾಂದೇ ಧರ್ಮದಲ್ಲಿ ಯಾವುದೇ ಸರಕಾರೀ ಲಕ್ಷೇಪವನ್ನು ತಡೆಯುವುದು, ಎಲ್ಲಾ ಸಂಪ್ರದಾಯಗಳ ತೀರ್ಥಗಳ, ದೇವಸ್ಥಾನಗಳ, ಉಪಾಸನಾ ಗೃಹಗಳ ಹಾಗೂ ಧಾರ್ಮಿಕ ಸಂಸ್ಥೆಗಳ ರಕ್ಷಣೆ ಮಾಡುವುದು, ಆಯಾ ಸಂಪ್ರದಾಯಗಳ ಉಪಹರಿಸಲ್ಪಟ್ಟ ಧರ್ಮಸ್ಥಾಸಗಳನ್ನು ಸನ್ನಾನಸಹಿತವಾಗಿ ಹಿಂದಕ್ಕೆ ಕೊಡಿಸಿ ಪಂಪ್ರಂ ಸದ್ಭಾವನೆಯನ್ನು ದೃಢಪಡಿಸುವುದು ಮತ್ತು ಯಾವುದೇ ಧರ್ಮ ಮತ್ತು ಸಂಸ್ಕೃತಿಯ ಪ್ರಾಶಸ್ತ್ಯವನ್ನು ಆ ಸಂಪ್ರದಾಯದ ಧರ್ಮಗ್ರಂಥಗಳ ಮತ್ತು ಧರ್ಮಾಚಾರ್ಯರುಗಳ ಮೂಲಕ ಮಾಡಲ್ಪಟ್ಟದ್ದನ್ನು ಒಪ್ಪುವುದು.

೧೯ ಪ್ರಜೆಗಳ ಮತ್ತು ರಾಜ್ಯದ ಕರ್ತವ್ಯ— ಹಿಂದೆ ಹೇಳಿದಂತೆ ಭಾರತದ ಪರಿಸ್ಥಿತಿಯು ಶೋಚನೀಯವಾಗಿ. ಇದಂ ಬಾಹ್ಯ ಹಾಗೂ ಆಂತರಿಕ ಪರಿಸ್ಥಿತಿಗಳು ಸಂತೋಷಜನಕವಾಗಿಲ್ಲ. ದೇಶದ ನೇತೃಗಳ ಭ್ರಮಾಪ್ರವಾದ ಪೂರ್ಣ ಕಾರ್ಯಗಳು ಮತ್ತು ದೈವೀ ಪ್ರಕೋಪವೇ ಇವಕ್ಕೆ ಕಾರಣ. ಸ್ವಯಂ ಭಾರತದ ಕರ್ಣಧಾರರೇ ಒಪ್ಪಿಕೊಳ್ಳುವಂತೆ ಭಾರತವು ಅತ್ಯಂತ ವಿಕಟಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದೆ. ಆದುದರಿಂದ ಜನರು ದೇಶದ ಅಭಿವೃದ್ಧಿಗಾಗಿ ಉದ್ಯುಕ್ತ ಶೀಲರಾಗಬೇಕು. ಸರಕಾರವೂ ಕೂಡ ಹೆಚ್ಚು ಹೆಚ್ಚು ಹಿರಿಯ ವಿಘಟನೆಗಳನ್ನು ದೂರಪಡಿಸುತ್ತಾ ಹಿಂದೂಕೋಡಿನಂತಹ ಚರ್ಚಾಸ್ಪದ ಮತ್ತು ಅನಾವಶ್ಯಕವಾದ ಶಾಸನಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಲ್ಲದೆ ಪ್ರಜೆಗಳ ಅಭಿಪ್ರಾಯಾನುಸಾರವಾಗಿ ಕಾರ್ಯ ಮಾಡುತ್ತಿಲ್ಲ ಅವರನ್ನು ಸಂತೋಷಗೊಳಿಸಬೇಕು.

೨೦ ಸಂಘಟನೆ— 'ಸಂಘೇಶಕ್ತಿಃ ಕಲೌಯುಗೆ' ಎಂಬ ಉಕ್ತಿಯಂತೆ ಈಗ ಸಂಘಟನೆಯು ಅತ್ಯಾವಶ್ಯಕ. ವಿಧರ್ಮಿಗಳಿಂದಲೂ, ನಾಸ್ತಿಕರಿಂದಲೂ, ವಿವಿಧ ಕ್ರಾಂತಿಕಾರರಿಂದಲೂ ಸಂಘಟಿತ ರೂಪದಿಂದ ಸನಾತನ ಧರ್ಮಾನುಯಾಯಿಗಳಲ್ಲಿ ಸಂಘಟನೆ ಇಲ್ಲದಿರುವುದರಿಂದ ಧರ್ಮಪ್ರಾಣವೆನಿಸಿಕೊಂಡ ಈ ದೇಶದಲ್ಲಿಯೂ ಧರ್ಮಕ್ಕೆ ಅಂತಹ ಗಾಸಿಯೊದಗಿತು ಸಂಘಟನೆಗಾಗಿ ಎಷ್ಟೋ ಸಂಸ್ಥೆಗಳು ಸ್ಥಾಪಿತವಾಗಿ ಕಾರ್ಯಮಾಡುತ್ತಿದ್ದಾಗ್ಯೂ ತಕ್ಕಷ್ಟು ಸಂಘಟನೆಯಾಗಿಲ್ಲ : ಆದರೂ ಈಗ ಅಖಿಲ ಭಾರತವರ್ಷೀಯ ಧರ್ಮಸಂಘ, ಅ. ಭಾ. ರಾಮರಾಜ್ಯ ಪರಿಷತ್ತು ಮುಂತಾದವುಗಳು ದೇಶದಲ್ಲಿ ಪ್ರಚಾರ ನಡೆಸಿ ಅಲ್ಪಸ್ವಲ್ಪ ಜಾಗೃತಿ ಹುಟ್ಟಿದೆ; ಆದಾಗ್ಯೂ ಪೂರ್ಣ ಸಂಘಟನೆಯಾಗಬೇಕಾಗಿದೆ ; ಆದುದರಿಂದ ಸಮಸ್ತ ಧರ್ಮಾಸಂಸ್ಥೆಗಳು ಸರ್ವತ್ರ ಧರ್ಮಸಂಘ, ರಾಮರಾಜ್ಯ ಪರಿಷತ್, ಮಹಿಳಾಸಂಘ ಮುಂತಾದ ಸಂಸ್ಥೆಗಳನ್ನು ಪ್ರತಿಯೊಂದು ಗ್ರಾಮದಲ್ಲಿ ಸ್ಥಾಪಿಸಬೇಕಲ್ಲದೆ, ಎಲ್ಲರೂ ಈ ಸಂಸ್ಥೆಗಳನ್ನು ಸದಸ್ಯರಾಗಿ ಇವುಗಳ ವಿಶ್ವಕಲ್ಯಾಣಕಾರೀ ಶ್ರೇಷ್ಠವಾದ ರಾಮರಾಜ್ಯದ ಉದ್ದೇಶವನ್ನು ಸಫಲಗೊಳಿಸಲು ಪ್ರಯತ್ನಿಸಬೇಕು. ಎಲ್ಲೆಲ್ಲಿ ಈ ಸಂಘಗಳ ಶಾಖೆಗಳು ಸ್ಥಾಪಿತವಾಗಿವೆಯೋ, ಅಲ್ಲಲ್ಲಿಯ ಕಾರ್ಯಕರ್ತರುಗಳು ನಿಷ್ಕ್ರಿಯರಾಗದೆ ಚೆನ್ನಾಗಿ ಕಾರ್ಯ ನಡೆಸಬೇಕು : ಏಕೆಂದರೆ ಕೇವಲ ಶಾಖೆ ಸ್ಥಾಪಿತವಾಗಿ ಕಾರ್ಯಮಾಡದೆ ನಾಮಮಾತ್ರಕ್ಕಿರುವುದು ಶೋಭಾಸ್ಪದವಲ್ಲ ; ಆದ್ದರಿಂದ ಇನ್ನಾದರೂ ಎಲ್ಲಾ ಶಾಖೆಗಳ ಕಾರ್ಯಕರ್ತರುಗಳು ಪೂರ್ಣ ಕಾರ್ಯಶೀಲರಾಗಲಿ ಉಪರ್ಯುಕ್ತ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀ ಕರಪಾತ್ರೀ ಸ್ವಾಮಿಗಳವರು ಇತ್ತೀಚೆಗೆ ದೇಶದ ಎಲ್ಲಾ ಪ್ರಾಂತಗಳಲ್ಲಿ ಅವಿಶ್ರಾಂತವಾಗಿ ಸಂಚರಿಸಿ ಸಂಘಟನೆಯನ್ನು ಬಲಪಡಿಸುತ್ತಿರುವುದು ದೇಶದ ಶುಭೋದಯದ ಲಕ್ಷಣ. ಇದರಂತೆಯೇ ಸಮಸ್ತ ಸಾಧುಸಂತ ಮಹಾತ್ಮರೂ ಬ್ರಹ್ಮಚಾರೀ ಸನ್ಯಾಸಿಗಳೂ ನಿಃಸ್ವಾರ್ಥ ವೃತ್ತಿಯಿಂದ ಧರ್ಮಪ್ರಚಾರವನ್ನೂ ಸಂಘಟನ ಕಾರ್ಯವನ್ನೂ ಮಾಡಲಿ.

ಕೊನೆಯಲ್ಲಿ ಶ್ರೀ ದ್ವಾರಕಾಧೀಶ ಶ್ರೀ ಕೃಷ್ಣಭಗವಂತನು ನೇತೃಗಳಿಗೂ ಪ್ರಜೆಗಳಿಗೂ ಸದ್ಬುದ್ಧಿಯನ್ನು ದಯಪಾಲಿಸಲೆಂದೂ, ಸರ್ವವಿಧವಾಗಿ ಮಂಗಳವನ್ನುಂಟುಮಾಡಲೆಂದೂ, ಭಾರತದೇಶವನ್ನು ಪೂರ್ಣಸಮೃದ್ಧಿಗೊಳಿಸಲೆಂದೂ, ಸಮ್ಮ ಶುಭಾಶೀರ್ವಾದಗಳು.

ಮೊಕ್ಕಾಂ— ಸೂರತ್
ಸ್ವಾತಂತ್ರ್ಯೋತ್ಸವ ದಿನ
ಖರ ಸಂ || ಶ್ರಾವಣ ಶು. ೧೩

— ಇತಿ ಶಂ —



ಶ್ರೀ ದ್ವಾರಕಾ ಶಾರದಾಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯ
ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳವರು

Edited, Printed and Published by Dharma Prachara Nirata M. S. Krishna Rao, at the Satyavadi Press Chamrajapuram Mysore